File No.EP/22/MCD/2020-PLAN-EP-Sec

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಸಮಗ್ರ ಶಿಕ್ಷಣ- ಕರ್ನಾಟಕ ಯೋಜನೆಯ ಅಡಿಯಲ್ಲಿ ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು (ಕಾರ್ಯಕ್ರಮ ಹಾಗೂ ಗುಣಮಟ್ಟ)/ಸಹಾಯಕ ಸಮನ್ವಯಾಧಿಕಾರಿಗಳು (ಕಾರ್ಯಕ್ರಮ, ಗುಣಮಟ್ಟ)/ ಬಿ.ಆರ್.ಸಿ.ಸಿ/ಬಿ.ಆರ್.ಪಿ ಹಾಗೂ ಸಿ.ಆರ್.ಪಿ.ಗಳ ಕರ್ತವ್ಯ ಹಾಗೂ ಜವಾಬ್ದಾರಿಗಳ ಮಾರ್ಗಸೂಚಿ ನೀಡುವ ಬಗ್ಗೆ.

ಓದಲಾಗಿದೆ : ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ಇವರ ಏಕ ಕಡತ ಸಂಖ್ಯೆ: ಸಶಿಕ/ಮಾ.ದಾ/Job Chart/2020-21
ಸರ್ಕಾರದ ಆದೇಶ ಸಂಖ್ಯೆ: ಇಡಿ 27 ಎಂಸಿಡಿ 2018, ಬೆಂಗಳೂರು ದಿನಾಂಕ:21.08.2018.

******

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1)ರ ಏಕ ಕಡತ ಪ್ರಸ್ತಾವನೆಯಲ್ಲಿ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ಇವರು ಸರ್ವ ಶಿಕ್ಷಣ ಅಭಿಯಾನ ಹಾಗೂ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಮತ್ತು ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳನ್ನು ಏಕೀಕರಣಗೊಳಿಸಿ, "ಸಮಗ್ರ ಶಿಕ್ಷಣ ಅಭಿಯಾನ" ಕಾರ್ಯಕ್ರಮವನ್ನು ಕೇಂದ್ರ ಸರ್ಕಾರವು ದಿನಾಂಕ:01.04.2018ರಿಂದ ಜಾರಿಗೆ ತಂದಿದ್ದು, ಪ್ರಸ್ತುತ ಸಮಗ್ರ ಶಿಕ್ಷಣ ಕರ್ನಾಟಕ ಅಭಿಯಾನದಡಿ ರಾಜ್ಯ/ ಜಿಲ್ಲಾ/ಬ್ಲಾಕ್/ಶಾಲಾ ಮಟ್ಟದಲ್ಲಿ ವಿವಿಧ ಹುದ್ದೆಗಳನ್ನು . ಮುಂದುವರಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಇಬ್ಬರು ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು (ಗುಣಮಟ್ಟ ಮತ್ತು ಕಾರ್ಯಕ್ರಮ), ಇಬ್ಬರು ಸಹಾಯಕ ಸಮನ್ವಯಾಧಿಕಾರಿಗಳು, ಬ್ಲಾಕ್ ಹಂತದಲ್ಲಿ ಒಬ್ಬರು ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಮನ್ವಯಾಧಿಕಾರಿಗಳು, 5 ಜನ ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಂಪನ್ಮೂಲ ವ್ಯಕ್ತಿಗಳು ಹಾಗೂ ಕ್ಲಸ್ಟರ್ ಗೆ ಒಬ್ಬರಂತೆ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು ಎಂದು ಪದನಾಮಿಕರಿಸಿದ್ದು, ಇವರೆಲ್ಲರ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಹಂಚಿಕೆ ಮಾಡುವಂತ ಕೋರಿರುತ್ತಾರ.

ಮೇಲೆ ಓದಲಾದ ಕ್ರಮಾಂಕ (2)ರ ಸರ್ಕಾರಿ ಆದೇಶದಲ್ಲಿ ಸಮಗ್ರ ಶಿಕ್ಷಣ ಅಭಿಯಾನದಡಿ ರಾಜ್ಯ ಜಿಲ್ಲಾ/ ಬ್ಲಾಕ್/ಶಾಲಾ ಮಟ್ಟದಲ್ಲಿ 2018-19ನೇ ಶೈಕ್ಷಣಿಕ ಸಾಲಿಗೆ ಅಗತ್ಯ ಹುದ್ದೆಗಳನ್ನು ಮುಂದುವರಿಸಿ ಆದೇಶಿಸಲಾಗಿರುತ್ತದೆ.



ಎನ್.ಎನ್.ಕಬ್ಬೂರ

Scanned by CamScanner

ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಪಿ 22 ಎಂಸಿಡಿ 2020 ಬೆಂಗಳೂರು**

**ದಿನಾಂಕ:30.12.2020**

ಸಮಗ್ರ ಶಿಕ್ಷಣ ಕರ್ನಾಟಕ ಅಭಿಯಾನದಡಿ ಜಿಲ್ಲಾ ಮಟ್ಟದಲ್ಲಿ ಇಬ್ಬರು ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು (ಗುಣಮಟ್ಟ ಮತ್ತು ಕಾರ್ಯಕ್ರಮ), ಇಬ್ಬರು ಸಹಾಯಕ ಸಮನ್ವಯಾಧಿಕಾರಿಗಳು, ಬ್ಲಾಕ್ ಹಂತದಲ್ಲಿ ಒಬ್ಬರು ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಮನ್ವಯಾಧಿಕಾರಿಗಳು, 5 ಜನ ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಂಪನ್ಮೂಲ ವ್ಯಕ್ತಿಗಳು ಹಾಗೂ ಕ್ಲಸ್ಟರ್ ಗೆ ಒಬ್ಬರಂತೆ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು ಎಂದು ಪದನಾಮಿಕರಿಸಿದ್ದು, ಇವರೆಲ್ಲರ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಅನುಬಂಧದಲ್ಲಿ (ಪುಟ 1 ರಿಂದ 16) ಒದಗಿಸಿರುವಂತೆ ಕಾರ್ಯ ಹಂಚಿಕೆ ಮಾಡಿ ಆದೇಶಿಸಿದೆ.

ಪ್ರಸ್ತುತ ರಾಜ್ಯದಲ್ಲಿ ಕೋವಿಡ್-19 ವಿಷಮ ಸ್ಥಿತಿಯಲ್ಲಿ ಆರ್ಥಿಕ ಮಿತವ್ಯಯ ಸಾಧಿಸಬೇಕಾದ ಅವಶ್ಯಕತೆಯಿದ್ದು, ಪದನಾಮಕರಿಸಲಾದ ಹುದ್ದೆಗಳಿಗೆ ಯಾವುದೇ ಹೆಚ್ಚುವರಿ ಆರ್ಥಿಕ ಹೊರೆ ಆಗದಂತೆ ಕ್ರಮವಹಿಸತಕ್ಕದ್ದು ಮತ್ತು ಹೆಚ್ಚುವರಿಯಾಗಿ ಅನುದಾನ ಕೋರತಕ್ಕದ್ದಲ್ಲ.

ಸಮಗ್ರ ಶಿಕ್ಷಣ - ಕರ್ನಾಟಕದಡಿ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ಇವರು ಸೂಕ್ತ ಕ್ರಮ ತೆಗೆದುಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್.ಡಿ 04 ಟಿ.ಎಫ್.ಪಿ 2020 ದಿನಾಂಕ:24.11.2020 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

30.12.2020

(ಎಸ್.ಆರ್.ಎಸ್.ನಾಥನ್)
ವಿಶೇಷಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ (ಯೋಜನೆ)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, (ಆಡಿಟ್ 1 & 2) ಕರ್ನಾಟಕ, ಬೆಂಗಳೂರು.



ಎನ್.ಎನ್.ಕಬ್ಬೂರ

Scanned by CamScanner

2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.
4. ನಿರ್ದೇಶಕರು, ಖಜಾನಾ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು.
5. ಉಪನಿರ್ದೇಶಕರು, ಖಜಾನಾ ಗಣಕ ಕೇಂದ್ರ, ನಂ.49, ಖನಿಜ ಭವನ, ರೇಸ್ಕೋರ್ಸ್ ರಸ್ತೆ, ಬೆಂಗಳೂರು.
6. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ಸರ್ಕಾರದ ಉಪಕಾರ್ಯದರ್ಶಿ-2, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
8. ಸಾಪ್ತಾಹಿಕ ರಾಜ್ಯ ಪತ್ರ/ಶಾಖಾರಕ್ಷ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ ಮಾಹಿತಿಗಾಗಿ.

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು
3. ಆಂತರಿಕ ಆರ್ಥಿಕ ಸಲಹೆಗಾರರ ಆಪ್ತ ಸಹಾಯಕರು, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.



ಎನ್.ಎನ್.ಕಬ್ಬೂರ

Scanned by CamScanner

## ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳ (BRP) ಕರ್ತವ್ಯಗಳು ಮತ್ತು ಜವಾಬ್ದಾರಿಗಳು

- ಸರ್ವ ಶಿಕ್ಷಣ ಅಭಿಯಾನದ ಮುಖ್ಯ ಗುರಿಯಾದ 'ಗುಣ ಮಟ್ಟದ ಶಿಕ್ಷಣ ಸಾರ್ವತ್ರೀಕರಣ' ಸಾಧಿಸುವ ನಿಟ್ಟಿನಲ್ಲಿ ಶಿಕ್ಷಕರ ಸಬಲೀಕರಣ ಪ್ರಮುಖ ಆಯಾಮವಾಗುವುದರಿಂದ ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರ ಸಂಪನ್ಮೂಲ ಕೇಂದ್ರವನ್ನು ರಚಿಸಲಾಗಿದೆ. ಈ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಿಆರ್‌ಪಿಗಳು ತಮ್ಮ ಕ್ಷೇತ್ರದಲ್ಲಿ ಎಲ್ಲಾ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ದೊರೆಯುವಂತೆ ಕ್ರಮ ವಹಿಸಬೇಕಾಗುತ್ತದೆ.
- ತಮ್ಮ ಕ್ಷೇತ್ರದ ಕ್ಲಸ್ಟರ್ ಶೈಕ್ಷಣಿಕ ಯೋಜನೆಗಳನ್ನು ಕ್ರೋಢೀಕರಿಸಿ ತಾಲ್ಲೂಕಿನ ಶೈಕ್ಷಣಿಕ ಯೋಜನೆಯನ್ನು ಸಿದ್ಧಪಡಿಸಿ ಅದರಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಬಿಆರ್‌ಸಿಸಿ ಯವರಿಗೆ ನೆರವಾಗುವುದು.
- ತಮ್ಮ ಬ್ಲಾಕಿನಲ್ಲಿ ನಡೆದಿರುವ ಅಧ್ಯಯನಗಳ, ಅವಿಷ್ಕೃತ ಚಟುವಟಿಕೆಗಳ, ಶೈಕ್ಷಣಿಕ ಕಾರ್ಯಕ್ರಮಗಳ ಮಾಹಿತಿಯನ್ನು ಸಂಗ್ರಹಿಸಿ ಅಧ್ಯಯನ ಮಾಡುವುದು ಮತ್ತು ಶೈಕ್ಷಣಿಕ ಯೋಜನೆಗಳನ್ನು ಅಳವಡಿಸಿಕೊಳ್ಳುವುದು.
- ಪ್ರತಿ ಶಾಲೆಯನ್ನು ಒಂದು ಘಟಕವಾಗಿ ಪರಿಗಣಿಸಿ ಆ ಶಾಲೆಯ ಶೈಕ್ಷಣಿಕ ಸ್ಥಿತಿಯನ್ನು ಗುರ್ತಿಸಿ ಅಗತ್ಯತೆಗಳಿಗನುಗುಣವಾಗಿ, ಶಾಲಾ ನಿರ್ದಿಷ್ಟ ಯೋಜನೆಗಳನ್ನು ರೂಪಿಸುವುದು ಹಾಗೂ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವುದು.
- ತಾಲ್ಲೂಕಿನ ಶೈಕ್ಷಣಿಕ ಸ್ಥಿತಿಯನ್ನು ವಿಶ್ಲೇಷಿಸಿ ಅದಕ್ಕೆ ಪೂರಕವಾದ ಶಿಕ್ಷಕರ ಸೇವಾ ನಿರತ ತರಬೇತಿಗೆ ಪ್ರಸ್ತಾವನೆ ಸಿದ್ಧಪಡಿಸಿ ಡಯಟ್‌ಗೆ ಮತ್ತು ಡಿಎಸ್‌ಇಆರ್‌ಟಿಗಳಿಗೆ ಸಲ್ಲಿಸುವುದು ಹಾಗೂ ತರಬೇತಿಗಳನ್ನು ನೀಡುವುದು.
- ತರಬೇತಿಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶಿಕ್ಷಕರೊಡನೆ ಬೆರೆತು, ಭಾಗವಹಿಸುವಿಕೆ ವಿಧಾನದಿಂದ ತರಬೇತಿಗಳನ್ನು ನೀಡುವುದು. ಬಿಆರ್‌ಪಿಗಳು ಕೇವಲ ತರಬೇತಿ ನಿರ್ವಾಹಕರಾಗದೆ, ನೈಜ ಅರ್ಥದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ತರಬೇತಿಯಲ್ಲಿ ಸಕ್ರೀಯವಾಗಿ ತೊಡಗಿಸಿಕೊಳ್ಳುವುದು.
- ಶೈಕ್ಷಣಿಕ ವರ್ಷದ ಆರಂಭದಲ್ಲಿ ಶೈಕ್ಷಣಿಕ ಚಟುವಟಿಕೆಗಳಿಗೆ ನೆರವಾಗುವುದು. ಶೈಕ್ಷಣಿಕ ಗುಣಮಟ್ಟ ಉತ್ತಮಪಡಿಸುವ ಕಾರ್ಯಕ್ರಮಗಳು ಸಮರ್ಪಕವಾಗಿ ನಡೆಯುವಂತೆ ಯೋಜಿಸಿ, ಮಾರ್ಗದರ್ಶನ ನೀಡುವುದು ಹಾಗೂ ಅನುಪಾಲನೆ ಮಾಡುವುದು.
- ಕ್ಲಸ್ಟರ್ ಹಂತದಲ್ಲಿ ನಡೆಯುವ ಶೈಕ್ಷಣಿಕ ಸಮಾಲೋಚನಾ ಸಭೆಗಳಲ್ಲಿ ಭಾಗವಹಿಸುವುದು.
- ತಮ್ಮ ಕ್ಷೇತ್ರದಲ್ಲಿನ ವಿಷಯವಾರು ಸಂಪನ್ಮೂಲ ವ್ಯಕ್ತಿಗಳ ಮಾಹಿತಿಯನ್ನು ಸಂಗ್ರಹಿಸುವುದು.
- ಸಮಗ್ರ ಶಿಕ್ಷಣ - ಕರ್ನಾಟಕ ಹಾಗೂ ಇಲಾಖೆಯಿಂದ ಶಾಲೆಗಳಿಗೆ ಬಿಡುಗಡೆಯಾಗುವ ಎಲ್ಲಾ ಅನುದಾನಗಳನ್ನು ಮಕ್ಕಳ ಶೈಕ್ಷಣಿಕ ಸ್ಥಿತಿ ಉತ್ತಮಗೊಳ್ಳುವ ರೀತಿಯಲ್ಲಿ ಬಳಕೆಯಾಗುವಂತೆ ಕ್ರಮ ವಹಿಸುವುದು.
- ಬಿಆರ್‌ಸಿ ಕೇಂದ್ರವನ್ನು ಒಂದು ಸಂಪನ್ಮೂಲ ಕೇಂದ್ರವಾಗಿ ಅಭಿವೃದ್ಧಿಪಡಿಸಲು ಬಿಆರ್‌ಸಿಯವರೊಂದಿಗೆ ಸಹಕರಿಸುವುದು.
- ಬಿಆರ್‌ಪಿ ಯವರು ಮಾಡುವ ಎಲ್ಲಾ ಶಾಲಾ ಭೇಟಿಗಳು ಸಮಗ್ರ ಭೇಟಿ ಮಾದರಿಯಲ್ಲಿರಬೇಕು. ಯಾವುದೇ ಕಾರಣದಿಂದ ಮಿಂಚಿನ ಸಂಚಾರ ಭೇಟಿಗಳಾಗಬಾರದು. ಒಂದು ತಿಂಗಳಿನಲ್ಲಿ ಕನಿಷ್ಠ 10 ಶಾಲೆಗಳ ಭೇಟಿ ಮಾಡುವುದು. ಬಿಇಓ / ಬಿಆರ್‌ಸಿಯವರು ನಡೆಸುವ ಶಾಲಾ ಶೈಕ್ಷಣಿಕ

ಎನ್.ಎಸ್.ಕಬ್ಬೂರ



ಎನ್.ಎಸ್.ಕಬ್ಬೂರ

Scanned by CamScanner

ಮೌಲ್ಯ ಮಾಪನ ಕಾರ್ಯದಲ್ಲಿ ಭಾಗವಹಿಸುವುದು ಹಾಗೂ ಕನಿಷ್ಠ ವಾರ್ಷಿಕ 25 ಶಾಲೆಗಳ ಶೈಕ್ಷಣಿಕ ಮೌಲ್ಯ ಮಾಪನ ಮಾಡುವುದು.

- ಶಾಲೆಗೆ ಭೇಟಿ ನೀಡಿದಾಗ ಮಕ್ಕಳ ಅಪೇಕ್ಷಿತ ಕಲಿಕಾ ಮಟ್ಟದ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು ಹಾಗೂ ಸೂಕ್ತ ಹಿಮ್ಮಾಹಿತಿಯನ್ನು ಶಿಕ್ಷಕರಿಗೆ ನೀಡುವುದು.
- ಬಿಆರ್‌ಸಿ ಕೇಂದ್ರದಲ್ಲಿ ಇಲಾಖೆ ಹಾಗೂ ಇತರ ಸಂಸ್ಥೆಗಳಿಂದ ಶಿಕ್ಷಕರಿಗೆ ನೀಡುವ ತರಬೇತಿಯ ಅನುಷ್ಠಾನದ ಬಗ್ಗೆ ಅಧ್ಯಯನ ಮಾಡಿ. ವಿಶ್ಲೇಷಿಸಿ ಮಾರ್ಪಾಡುಗಳ ಅಗತ್ಯವಿದ್ದಲ್ಲಿ ಬಿಆರ್‌ಸಿ ಯವರಿಗೆ ವರದಿ ಸಲ್ಲಿಸುವುದು.
- ತಮ್ಮ ಕ್ಷೇತ್ರದಲ್ಲಿನ ಸಮಗ್ರ ಶಿಕ್ಷಣ - ಕರ್ನಾಟಕ ಕಾರ್ಯಕ್ರಮದ ಚಟುವಟಿಕೆಗಳಾದ ಶಾಲೆಯಿಂದ ಹೊರಗುಳಿದ ಮಕ್ಕಳ ಕಾರ್ಯಕ್ರಮಗಳು, ಸಮನ್ವಯ ಶಿಕ್ಷಣ, ಆವಿಷ್ಕೃತ ಚಟುವಟಿಕೆಗಳು, ಶಾಲಾ ಅನುದಾನ, ಸಿವಿಲ್ ಕಾಮಗಾರಿಗಳು ಮುಂತಾದವುಗಳ ಅನುಷ್ಠಾನ, ಗುಣಮಟ್ಟ, ಉಪಯುಕ್ತತೆ, ಬಳಕೆ ಮತ್ತು ಪರಿಣಾಮಗಳ ಬಗ್ಗೆ ವಿಶ್ಲೇಷಣಾ ವರದಿಗಳನ್ನು ಸಿದ್ಧಪಡಿಸಿ ಬಿಆರ್‌ಸಿಗೆ ನೀಡುವುದು.
- ಬ್ಲಾಕ್ ಶಾಲೆಗಳ ಶ್ರೇಣೀಕರಣ, ವಿಚಾರ ಸಂಕಿರಣ, ಇತ್ಯಾದಿ ಕಲಿಕಾ - ಬೋಧನೆಗೆ ಪೂರಕವಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಬಿಆರ್‌ಸಿ ಯವರೊಂದಿಗೆ ಕ್ರಿಯಾಶೀಲರಾಗಿ ತೊಡಗಿಸಿಕೊಳ್ಳುವುದು.
- ಮಕ್ಕಳ ಜಾಡು ಹಿಡಿಯುವ ಕಾರ್ಯಕ್ರಮದಲ್ಲಿ ಬಿಆರ್‌ಸಿ ಯವರೊಂದಿಗೆ ಸಹಕರಿಸುವುದು.
- ತಮ್ಮ ವ್ಯಾಪ್ತಿಯ ಮತ್ತು ಬ್ಲಾಕ್‌ಗೆ ಸಂಬಂಧಿಸಿದ ಅಂಕಿ-ಅಂಶಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ಬಿಆರ್‌ಸಿ ರವರಿಗೆ ನೆರವಾಗುವುದು.
- ಮೇಲಧಿಕಾರಿಗಳು ಕೇಳುವ ಮಾಹಿತಿ ಒದಗಿಸಲು ಬಿಆರ್‌ಸಿಸಿ ಯವರೊಂದಿಗೆ ಸಹಕರಿಸುವುದು.
- ಬಿಇಓ / ಬಿಆರ್‌ಸಿ ಯವರು ಸಂಘ ಸಂಸ್ಥೆಗಳು, ಸಾರ್ವಜನಿಕರು, ಸಮುದಾಯ ಹಾಗೂ ಇತರ ಇಲಾಖೆಗಳೊಂದಿಗೆ ಸಮನ್ವಯ ಕಾರ್ಯದಲ್ಲಿ ಸಹಕರಿಸುವುದು.
- ತಮ್ಮ ವ್ಯಾಪ್ತಿಯ ಮಕ್ಕಳ ಸುರಕ್ಷತೆ, ಮಕ್ಕಳ ಹಕ್ಕುಗಳು ಹಾಗೂ ಪೋಕ್ಸೋ ಕಾಯಿದೆ-2012 ರ ಸಂಬಂಧ ಮತ್ತು ಆರ್.ಟಿ.ಇ ನಿಯಮ 2009 ರ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವುದು.
- ಮೇಲೆ ತಿಳಿಸಿದ ಅಂಶಗಳಲ್ಲದೆ, ಮೇಲಧಿಕಾರಿಗಳು ಸೂಚಿಸುವ ಇತರೆ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವುದು.

ಎಸ್.ಎಸ್.ಕಬ್ಬೂರ

ಎಸ್.ಎಸ್.ಕಬ್ಬೂರ

Scanned by CamScanner

**ಸರ್ವ ಶಿಕ್ಷಣ ಅಭಿಯಾನ ಕರ್ನಾಟಕ**
**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ,**
**ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ: ಶೈ.ತ./ಬಿ.ಆರ್.ಸಿ/ಕ.ಜ/2007-08 ದಿನಾಂಕ: 21-05-2008

# ಸುತ್ತೋಲೆ

ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳ (ಬಿಆರ್‌ಪಿ) ಕರ್ತವ್ಯ ಮತ್ತು ಜವಾಬ್ದಾರಿಗಳು

ಸರ್ವ ಶಿಕ್ಷಣ ಅಭಿಯಾನದ ಮುಖ್ಯ ಗುರಿಯಾದ **"ಗುಣಮಟ್ಟದ ಶಿಕ್ಷಣ ಸಾರ್ವತ್ರೀಕರಣ"** ಸಾಧಿಸುವ ನಿಟ್ಟಿನಲ್ಲಿ ಶಿಕ್ಷಕರ ಸಬಲೀಕರಣ ಪ್ರಮುಖ ಆಯಾಮವಾಗುವುದರಿಂದ ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರ ಸಂಪನ್ಮೂಲ ಕೇಂದ್ರವನ್ನು ರಚಿಸಲಾಗಿದೆ. ಈ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಿಆರ್‌ಪಿಗಳು ತಮ್ಮ ಕ್ಷೇತ್ರದಲ್ಲಿ ಎಲ್ಲಾ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ದೊರೆಯುವಂತೆ ಕ್ರಮ ವಹಿಸಬೇಕಾಗುತ್ತದೆ. ಬಿಆರ್‌ಸಿಯವರ ಕರ್ತವ್ಯ ನಿರ್ವಹಣೆಯಲ್ಲಿ ಪೂರಕವಾದ ಸಹಕಾರವನ್ನು ಬಿಆರ್‌ಪಿಯವರು ಕೊಡಬೇಕೆಂಬ ಸ್ಥೂಲ ಪರಿಕಲ್ಪನೆಯೊಂದಿಗೆ ಬಿಆರ್‌ಪಿಯವರ ಕರ್ತವ್ಯ ಮತ್ತು ಜವಾಬ್ದಾರಿಯನ್ನು ರೂಪಿಸಲಾಗಿದೆ.

❖ **ಶೈಕ್ಷಣಿಕ**

✓ ತಮ್ಮ ಕ್ಷೇತ್ರದ ಕ್ಲಸ್ಟರ್ ಶೈಕ್ಷಣಿಕ ಯೋಜನೆಗಳನ್ನು ಕ್ರೂಢೀಕರಿಸಿ ತಾಲ್ಲೂಕಿನ ಶೈಕ್ಷಣಿಕ ಯೋಜನೆಯನ್ನು ಸಿದ್ಧಪಡಿಸಿ ಅದರಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಬಿಆರ್‌ಸಿಯವರಿಗೆ ನೆರವಾಗುವುದು.

✓ ತಮ್ಮ ಬ್ಲಾಕಿನಲ್ಲಿ ನಡೆದಿರುವ ಅಧ್ಯಯನಗಳ, ಆವಿಷ್ಕೃತ ಚಟುವಟಿಕೆಗಳ ಶೈಕ್ಷಣಿಕ ಕಾರ್ಯಕ್ರಮಗಳ ಮಾಹಿತಿಯನ್ನು ಸಂಗ್ರಹಿಸುವುದು, ಅಧ್ಯಯನ ಮಾಡುವುದು ಮತ್ತು ಶೈಕ್ಷಣಿಕ ಯೋಜನೆಗಳನ್ನು ಅಳವಡಿಸಿಕೊಳ್ಳುವುದು.

(ಉದಾ : - ಕೆಎಸ್‌ಕ್ಯೂಎಒ, ಡಯಟ್‌ನಲ್ಲಿ ಕೈಗೊಂಡ ಅಧ್ಯಯನಗಳು ಇತ್ಯಾದಿ)

✓ ಪ್ರತಿ ಶಾಲೆಯನ್ನು ಒಂದು ಘಟಕವಾಗಿ ಪರಿಗಣಿಸಿ ಆ ಶಾಲೆಯ ಶೈಕ್ಷಣಿಕ ಸ್ಥಿತಿಯನ್ನು ಗುರ್ತಿಸಿ- ಅಗತ್ಯತೆಗಳಿಗನುಗುಣವಾಗಿ, ಶಾಲಾ ನಿರ್ದಿಷ್ಠ ಯೋಜನೆಗಳನ್ನು ರೂಪಿಸುವುದು ಹಾಗೂ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವುದು.

✓ ತಾಲ್ಲೂಕಿನ ಶೈಕ್ಷಣಿಕ ಸ್ಥಿತಿಯನ್ನು ವಿಶ್ಲೇಷಿಸಿ ಅದಕ್ಕೆ ಪೂರಕವಾದ ಶಿಕ್ಷಕರ ಸೇವಾ ನಿರತ ತರಬೇತಿಗಳಿಗೆ



ಎನ್.ಎನ್.ಕಬ್ಬೂರ

Scanned by CamScanner

ಪ್ರಸ್ತಾವನೆ ಸಿದ್ಧಪಡಿಸಿ ಡಯಟ್‌ಗೆ ಮತ್ತು ಡಿಎಸ್‌ಇಆರ್‌ಟಿಗಳಿಗೆ ಸಲ್ಲಿಸುವುದು. ಹಾಗೂ ತರಬೇತಿಗಳನ್ನು ನೀಡುವುದು.

- ✓ ತರಬೇತಿಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶಿಕ್ಷಕರೊಡನೆ ಬೆರೆತು, ಭಾಗವಹಿಸುವಿಕೆ ವಿಧಾನದಿಂದ ತರಬೇತಿಗಳನ್ನು ನೀಡುವುದು. ಬಿಆರ್‌ಪಿಗಳು ಕೇವಲ ತರಬೇತಿ ನಿರ್ವಾಹಕರಾಗದೆ, ನೈಜ ಅರ್ಥದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ತರಬೇತಿಯಲ್ಲಿ ಭಾಗವಹಿಸತಕ್ಕದ್ದು.

- ✓ ಶೈಕ್ಷಣಿಕ ವರ್ಷದ ಆರಂಭದಲ್ಲಿ ಸೇತುಬಂಧ ಕಾರ್ಯಕ್ರಮ ನಂತರದಲ್ಲಿ ಪರಿಹಾರ ಬೋಧನೆ, ಕಲಿಕಾ ಆಂದೋಲನಗಳಂತಹ ಶೈಕ್ಷಣಿಕ ಗುಣಮಟ್ಟ ಉತ್ತಮಪಡಿಸುವ ಕಾರ್ಯಕ್ರಮಗಳು ಸಮರ್ಪಕವಾಗಿ ನಡೆಯುವಂತೆ ಯೋಜಿಸಿ, ಮಾರ್ಗದರ್ಶನ ನೀಡುವುದು ಹಾಗೂ  ಅನುಪಾಲನೆ ಮಾಡುವುದು.

- ✓ ಕ್ಲಸ್ಟರ್ ಹಂತದಲ್ಲಿ ನಡೆಯುವ ಶೈಕ್ಷಣಿಕ ಸಮಾಲೋಚನ ಸಭೆಗಳಲ್ಲಿ ಭಾಗವಹಿಸುವುದು.

- ✓ ತಮ್ಮ ಕ್ಷೇತ್ರದಲ್ಲಿನ ವಿಷಯವಾರು ಸಂಪನ್ಮೂಲ ವ್ಯಕ್ತಿಗಳ ಮಾಹಿತಿಯನ್ನು ಹೊಂದಿರುವುದು.

- ✓ ಸರ್ವ ಶಿಕ್ಷಣ ಅಭಿಯಾನದಿಂದ ಬಿಡುಗಡೆಯಾಗುವ ಅನುದಾನಗಳನ್ನು ಶಾಲೆಯ ಹಾಗೂ ಮಕ್ಕಳ ಶೈಕ್ಷಣಿಕ ಸ್ಥಿತಿ ಉತ್ತಮಗೊಳ್ಳುವ ರೀತಿಯಲ್ಲಿ ಬಳಕೆಯಾಗುವಂತೆ ಕ್ರಮ ವಹಿಸುವುದು.

- ✓ ಬಿಆರ್‌ಸಿ ಕೇಂದ್ರವನ್ನು ಒಂದು ಸಂಪನ್ಮೂಲ ಕೇಂದ್ರವಾಗಿ ಅಭಿವೃದ್ಧಿಪಡಿಸಲು ಬಿಆರ್‌ಸಿಯವರೊಂದಿಗೆ ಸಹಕರಿಸುವುದು.

- ✓ ತಾಲ್ಲೂಕಿನಲ್ಲಿನ ಶಾಲೆಗಳಿಗೆ ಭೇಟಿ ನೀಡಿ ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳ ಹಾಗೂ ತರಬೇತಿಗಳ ಪರಿಣಾಮವನ್ನು ವಿಶ್ಲೇಷಿಸಿ ಸಂಪದೀಕರಿಸುವುದು. ಬಿಆರ್‌ಪಿಯವರು ಮಾಡುವ ಎಲ್ಲಾ ಭೇಟಿಗಳು ಸಮಗ್ರ ಭೇಟಿ ಮಾದರಿಯಲ್ಲಿರಬೇಕು. ಯಾವುದೇ ಕಾರಣದಿಂದ ಕ್ಷಿಪ್ರ ಭೇಟಿಗಳಾಗಬಾರದು. ಒಂದು ತಿಂಗಳಿನಲ್ಲಿ ಕನಿಷ್ಟ 10 ಭೇಟಿಗಳನ್ನು ನಿರ್ವಹಿಸುವುದು.  ಬಿಇಓ / ಬಿಆರ್‌ಸಿಯವರು ನಡೆಸುವ ಶಾಲಾ ಶೈಕ್ಷಣಿಕ ಮೌಲ್ಯ ಮಾಪನದಲ್ಲಿ ಭಾಗವಹಿಸಬೇಕು. ವಾರ್ಷಿಕ ಕನಿಷ್ಟ 25 ಶೈಕ್ಷಣಿಕ ಮೌಲ್ಯ ಮಾಪನ ಮಾಡಬೇಕು.

- ✓ ಶಾಲೆಗೆ ಭೇಟಿ ನೀಡಿದಾಗ ಮಕ್ಕಳ ಅಪೇಕ್ಷಿತ ಮಟ್ಟದ ಕಲಿಕೆ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು, ಹಾಗೂ ಯುಕ್ತ ಹಿಮ್ಮಾಹಿತಿಯನ್ನು ಅಧ್ಯಾಪಕರಿಗೆ ನೀಡುವುದು.

- ✓ ಬಿಆರ್‌ಸಿ ಹಾಗೂ ಇತರೆ ಸಂಸ್ಥೆಗಳಿಂದ ಶಿಕ್ಷಕರಿಗೆ ನೀಡುವ ತರಬೇತಿಯ ಅನುಷ್ಠಾನ, ಬಳಕೆ ಮಾಡುತ್ತಿರುವ ಬಗ್ಗೆ ಅಧ್ಯಯನ ಮಾಡಿ ವಿಶ್ಲೇಷಿಸಿ ಮಾರ್ಪಾಡುಗಳ ಅಗತ್ಯವಿದ್ದಲ್ಲಿ ಬಿಆರ್‌ಸಿಯವರಿಗೆ ಮಂಡಿಸುವುದು.





Scanned by CamScanner

✓ ತಮ್ಮ ಕ್ಷೇತ್ರದಲ್ಲಿನ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದ ಚಟುವಟಿಕೆಗಳಾದ ಶಾಲೆಯಿಂ ಹೊರಗುಳಿದ ಮಕ್ಕಳ ಕಾರ್ಯಕ್ರಮಗಳು, ಸಮನ್ವಯ ಶಿಕ್ಷಣ, ಆವಿಷ್ಕೃತ ಚಟುವಟಿಕೆಗಳು, ಶಾಲ ಅನುದಾನ, ಶಿಕ್ಷಕರ ಅನುದಾನ, ಸಿವಿಲ್ ಕಾಮಗಾರಿಗಳು ಮುಂತಾದವುಗಳ ಅನುಷ್ಠಾನ, ಗುಣಮಟ್ಟ ಉಪಯುಕ್ತತೆ, ಬಳಕೆ ಮತ್ತು ಪರಿಣಾಮಗಳ ಬಗ್ಗೆ ವಿಶ್ಲೇಷಣಾ ವರದಿಗಳನ್ನು ಸಿದ್ಧಪಡಿಸಿ ಬಿಆರ್‌ಸಿ ನೀಡುವುದು.

✓ ಸಂಪನ್ಮೂಲ ಶಿಕ್ಷಕರಾಗಿ ಶಾಲೆಗಳಿಗೆ ಭೇಟಿ ನೀಡಿ ಮುಖ್ಯ ಶಿಕ್ಷಕರು, ಶಿಕ್ಷಕರು, ಸಿಆರ್‌ಪಿಗಳು ಐಇಆರ್‌ಟಿಗಳು, ಪೋಷಕರು ಮತ್ತು ವಿದ್ಯಾರ್ಥಿಗಳೊಂದಿಗೆ ತಮ್ಮ ಸಂಪನ್ಮೂಲ ವಿನಿಯಮ ಮಾಡಿಕೊಳ್ಳುವುದು ಹಾಗೂ ಬಿಆರ್‌ಸಿ ರವರಿಗೆ ವರದಿ ನೀಡುವುದು.

✓ ಬ್ಲಾಕ್ ಶಾಲೆಗಳ ಶ್ರೇಣೀಕರಣ, ವಿಚಾರ ಸಂಕಿರಣ; ಇತ್ಯಾದಿ ಕಲಿಕೆ – ಬೋಧನೆಗೆ ಪೂರಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಬಿಆರ್‌ಸಿಯವರೊಂದಿಗೆ ಕ್ರಿಯಾಶೀಲರಾಗಿ ತೊಡಗಿಕೊಳ್ಳುವುದು.

❖ **ಸಾರ್ವತ್ರಿಕ ಧಾರಣ / ದಾಖಲಾತಿ / ಅವಕಾಶ**

✓ ಮಕ್ಕಳ ಜಾಡು ಹಿಡಿಯುವ ಕಾರ್ಯಕ್ರಮದಲ್ಲಿ ಬಿಆರ್‌ಸಿಯವರೊಂದಿಗೆ ಸಹಕರಿಸುವುದು.

✓ ಗಣತಿ ಕಾರ್ಯ ದಾಖಲಾತಿ ಆಂದೋಲನ, ಇನ್ನಿತರ ಸಾರ್ವತ್ರಿಕ ಧಾರಣ / ದಾಖಲಾತಿ ಕುರಿತಂತೆ ಬಿಆರ್‌ಸಿಯವರ ಕಾರ್ಯದಲ್ಲಿ ಕ್ರಿಯಾಶೀಲರಾಗಿ ಭಾಗಿಯಾಗುವುದು

✓ ತಮ್ಮ ವ್ಯಾಪ್ತಿಯ ಮತ್ತು ಬ್ಲಾಕ್‌ಗೆ ಸಂಬಂಧಿಸಿದ ಅಂಕಿ ಅಂಶಗಳನ್ನು ಸಂಚಯಿಸಿ ರೂಢಿಸುವ ಕಾರ್ಯದಲ್ಲಿ ಬಿಆರ್‌ಸಿಯವರೊಂದಿಗೆ ಸಹಕರಿಸುವುದು.

✓ ಹಲವಾರು ಕಾರಣಗಳಿಂದ ಶಾಲೆಗಳಿಗೆ ನಿಯಮಿತವಾಗಿ ಹಾಜರಾಗದಿರುವ ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರ್ತಿಸಿ ಈ ಮಕ್ಕಳನ್ನು ಶಿಕ್ಷಣ ವ್ಯಾಪ್ತಿಯಲ್ಲಿಟ್ಟುಕೊಳ್ಳಲು ಪೂರಕವಾಗುವ ಕಾರ್ಯಕ್ರಮಗಳನ್ನು ರೂಪಿಸುವುದು ಹಾಗೂ ತಮ್ಮ ಕ್ಷೇತ್ರದ ಶಾಲೆ ಹಾಗೂ ಜನವಸತಿ ಪ್ರದೇಶಗಳಲ್ಲಿ ಈ ಬಗ್ಗೆ ಅನುಪಾಲನೆ ಮಾಡಿ ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣವನ್ನು ಯಶಸ್ವಿಗೊಳಿಸುವುದು.

❖ **ಆಡಳಿತ, ಉಸ್ತುವಾರಿ, ಸಮನ್ವಯನ**

✓ ಬಿಆರ್‌ಸಿಯವರು ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮಗಳ ಜಾರಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಅವರಿಗೆ ಇಂಬಾಗಿ ನಿಂತು ಅವರ ಕಾರ್ಯದಲ್ಲಿ ಸಹಕರಿಸುವುದು.

✓ ತಮ್ಮ ವ್ಯಾಪ್ತಿಯ ಐಇಆರ್‌ಟಿ, ಜೆಂಡರ್ ಕೋ ಆರ್ಡಿನೇಟರ್‌ಗಳ ಪ್ರವಾಸ / ದಿನಚರಿಯನ್ನು ಅವಲೋಕಿಸಿ ಅನುಮೋದನೆ ಮಾಡಲು ಬಿಆರ್‌ಸಿಯವರಿಗೆ ನೆರವಾಗುವುದು. ಹಾಗೂ ಸಿಆರ್‌ಪಿ ದಿನಚರಿ ಅವಲೋಕನ ಮಾಡಲು ಬಿಆರ್‌ಸಿಯವರಿಗೆ ನೆರವಾಗುವುದು.



ಎನ್.ಎನ್.ಕಬ್ಬೂರ.

Scanned by CamScanner

- ✓ ಹಿರಿಯ ಕಛೇರಿಗಳಿಂದ ಕೇಳುವ ಮಾಹಿತಿ ಒದಗಿಸಲು ಬಿಆರ್‌ಸಿಯವರೊಂದಿಗೆ ಸಹಕರಿಸುವುದು.
- ✓ ಬಿಇಓ / ಬಿಆರ್‌ಸಿಯವರು ಸಂಘ ಸಂಸ್ಥೆಗಳು; ಸಾರ್ವಜನಿಕರು; ಸಮುದಾಯ; ಇತರ ಇಲಾಖೆಗಳೊಂದಿಗೆ ಮಾಡುವ ಸಮನ್ವಯನ ಕಾರ್ಯದಲ್ಲಿ ಪೂರಕವಾಗಿ ಸಹಕರಿಸುವುದು.
- ✓ ಬಿಆರ್‌ಸಿ ಕಛೇರಿಯಲ್ಲಿ ರೂಢಿಸಲಾಗುವ ದಾಖಲೆಗಳ ನಿರ್ವಹಣೆಯಲ್ಲಿ ಬಿಆರ್‌ಸಿಯವರಿಗೆ ನೆರವಾಗುವುದು.

ಆಯುಕ್ತರು
ರಾಜ್ಯ ಯೋಜನಾ ನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು
ಸರ್ವ ಶಿಕ್ಷಣ ಅಭಿಯಾನ ಬೆಂಗಳೂರು



ಎನ್.ಎನ್.ಕಬ್ಬೂರ.

Scanned by CamScanner